# ಸಮನ್ವಯಮೂರ್ತಿ ಶ್ರೀರಾಮಕೃಷ್ಣ

**ಜೀ**ವನವೆಂಬುದು ಸಾಮಾನ್ಯ ಜಡವಸ್ತುವಿಗಿಂತ ಹಿರಿದಾದದ್ದು, ಹೆಚ್ಚು ಮೌಲ್ಯವುಳ್ಳದ್ದು. ನಿಜವಾಗಿಯೂ ಜೀವನವೇ ಎಲ್ಲ ವಸ್ತುಗಳಿಗೂ ಮೌಲ್ಯವನ್ನು ನೀಡುವಂತಹುದು. ಪ್ರಪಂಚದ ಅತ್ಯಂತ ಬೆಲೆಬಾಳುವ ವಸ್ತುಗಳೂ ತಮ್ಮ ಮೌಲ್ಯವನ್ನು ಮನುಷ್ಯನ ಜೀವನದಿಂದ ಪಡೆಯುತ್ತವೆ. ಇಂತಹ ಮೌಲ್ಯವಂತವಾದ ಜೀವನಕ್ಕೆ ಪ್ರಾಪಂಚಿಕ ವಿಷಯವಸ್ತುಗಳು ಸಾರ್ಥಕತೆಯನ್ನು ನೀಡಲಾರವು. ಜೀವನವೇ ಅವಕ್ಕೆ ಸಾರ್ಥಕತೆಯನ್ನು ನೀಡಬೇಕಾಗಿದೆ. ಈ ಜೀವನಕ್ಕೆ ಸಾರ್ಥಕತೆಯುಂಟಾಗಬೇಕಾದರೆ ಅದಕ್ಕಿಂತಲೂ ಹಿರಿದಾದ ವಸ್ತುವೊಂದನ್ನು ನಾವು ಅರಸಬೇಕು. ಈ ಅರಸುವಿಕೆ, ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಹೋರಾಟ ಜೀವನಕ್ಕೆ ನಿಜವಾದ ಸಾರ್ಥಕತೆಯನ್ನು ನೀಡುತ್ತದೆ. ಆ ಹಿರಿದಾದ ವಸ್ತುವೇ ನಮ್ಮ ವ್ಯಕ್ತಿತ್ವದ ಸಾರವಾದ ದಿವ್ಯತೆ ಅಥವಾ ಭಗವದ್ವಸ್ತು. ಈ ದಿವ್ಯತೆಯ ಜೀವನ, ಭಗವತ್‌ಕೇಂದ್ರಿತ ಜೀವನವೇ ನಿಜವಾದ ಸಾರ್ಥಕ  ಬದುಕು, ಇದೇ ಪರಮಸುಖವನ್ನು ನೀಡುವಂತಹುದು ಎಂಬುದನ್ನು ಶ್ರೀರಾಮಕೃಷ್ಣರು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು. ಭಗವತ್ಸಾಕ್ಷಾತ್ಕಾರವೇ ಮಾನವಜೀವನದ ಚರಮೋದ್ದೇಶವೆಂದು ಅವರು ಮತ್ತೆ ಮತ್ತೆ ಹೇಳಿದರು.

> ■ ದುರ್ಲಭವಾದ ಮಾನವಜನ್ಮವನ್ನು ಪಡೆದೂ ಈ ಜನ್ಮದಲ್ಲಿಯೇ ಭಗವತ್ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನ ಪಡದವನ ಜನ್ಮ ವ್ಯರ್ಥ. —ಶ್ರೀರಾಮಕೃಷ್ಣ ■

ಹಾಗಾದರೆ ಇಂದ್ರಿಯಪ್ರಪಂಚದ ತ್ಯಾಗದಿಂದ ಮನುಷ್ಯನಿಗೆ ಸುಖವೆ? ಇಂದ್ರಿಯ ಪ್ರಪಂಚದ ತ್ಯಾಗದಿಂದ ವ್ಯಕ್ತಿಯು ಸಮಾಜದಿಂದ, ಇಡೀ ಮಾನವಕೋಟಿಯಿಂದ ಬೇರೆಯಾಗುತ್ತಾನೆ. ತನ್ನದೇ ಆದ ವ್ಯಕ್ತಿತ್ವದ ಚೌಕಟ್ಟಿನಲ್ಲಿ ಬಾಳುತ್ತಾ ಆಧ್ಯಾತ್ಮಿಕ ಉನ್ನತಿಯನ್ನೂ ಕಳೆದುಕೊಳ್ಳುತ್ತಾನೆ. ತೀವ್ರ ವಿಷಯಾಸಕ್ತಿಯೂ ವ್ಯಕ್ತಿಯನ್ನು ಮಾನವಕೋಟಿಯಿಂದ ಪ್ರತ್ಯೇಕಿಸುತ್ತದೆ. ಅವನು ಸಮಾಜದ ನಡುವೆ ಇದ್ದರೂ, ತನ್ನ ಅದಮ್ಯ ಸುಖಾಪೇಕ್ಷೆಯಿಂದಾಗಿ ನೈಜ ಮಾನವಸಂಪರ್ಕವನ್ನು ಕಳೆದುಕೊಳ್ಳುತ್ತಾನೆ. ಅವನು ಕೇವಲ ಭೌತಿಕವಾಗಿ ಮಾತ್ರ ಜನರನ್ನು ಸಂಧಿಸುತ್ತಾನೆಯೇ ಹೊರತು ಹೃತ್ಪೂರ್ವಕವಾಗಿ ಅಲ್ಲ.

ಜೀವನದಲ್ಲಿ ಸುಖದಿಂದಲೂ ಇದ್ದು, ಮಾನವತೆಯಿಂದಲೂ ದೂರವಾಗದೆ ಇರಬೇಕಾದರೆ ನಾವು ಎಂಥ ಜೀವನವನ್ನು ನಡೆಸಬೇಕು? ಮಾನವ ವ್ಯಕ್ತಿತ್ವದ ನೈಜಸಾರವಾದ ದಿವ್ಯತೆಯ ಸಂಪರ್ಕವನ್ನು ಪಡೆಯಬೇಕು, ಇದರ ಮೂಲಕ ಮಾನವಕೋಟಿಯೊಂದಿಗೆ ಸಂಬಂಧವನ್ನು ಪಡೆಯಬೇಕು. ಇದೇ ನೈಜ ಸಂಬಂಧ. ಭೌತಿಕ ಮತ್ತು ಮಾನಸಿಕ ಸಂಬಂಧಗಳು ತಾತ್ಕಾಲಿಕವಾದುವು, ಸ್ವಾರ್ಥಪರವಾದುವು. ಸಮುದ್ರದ ಅಲೆಗಳಿಗೆ ನಿಜವಾದ ಸಂಬಂಧವಿರುವುದು ಅವುಗಳ ಸಾರವಾದ ನೀರಿನ ಮೂಲಕ. ಅವುಗಳ ಭೌತಿಕ ಸಂಬಂಧ ತಾತ್ಕಾಲಿಕ, ಮತ್ತು ಘರ್ಷಣೆಯೇ ಅಧಿಕವಾಗಿರಬಹುದು. ಹಾಗೆಯೇ ಮಾನವರ ಸಂಬಂಧ ಭೌತಿಕ ಮತ್ತು ಮಾನಸಿಕ ಮಟ್ಟವನ್ನು ಮೀರಿಹೋದಾಗಲೇ ಶಾಶ್ವತವಾಗುತ್ತದೆ. ಆದ್ದರಿಂದ ಮಾನವನ ಅಂತಃಸತ್ವವಾದ ದಿವ್ಯತೆಯೇ ಎಲ್ಲ ಮಾನವರನ್ನು ಒಂದಾಗಿ ಬೆಸೆಯುವ ಸೂತ್ರ. ಇಂಥ ದಿವ್ಯತೆಯ ಜೀವನ ಬದುಕಿಗೆ ಸಾರ್ಥಕತೆಯನ್ನು ನೀಡುವುದರ ಮೂಲಕ ಪರಮಸುಖವನ್ನು ನೀಡುತ್ತದೆ.

ಶ್ರೀರಾಮಕೃಷ್ಣರು ಇಂಥ ಜೀವನವನ್ನು ನಡೆಸಿದರು. ಅವರು ಎಲ್ಲ ಭೌತಿಕ ಮತ್ತು ಮಾನಸಿಕ ಇತಿ-ಮಿತಿಗಳನ್ನು ಮೀರಿಹೋಗಿ, ಎಲ್ಲ ಸಾಮಾಜಿಕ ಕಟ್ಟು ನಿಟ್ಟುಗಳನ್ನು ದಾಟಿಹೋಗಿ, ಎಲ್ಲ ಧಾರ್ಮಿಕ ಚೌಕಟ್ಟುಗಳನ್ನು ಅತಿಕ್ರಮಿಸಿ, ಎಲ್ಲ ಪ್ರಾಂತೀಯ ಜನಾಂಗೀಯ ಪರಿಮಿತಿಗಳನ್ನು ಮೀರಿಹೋಗಿ ಮಾನವನನ್ನು ಅವನ ನಿಜವಾದ ಸ್ವರೂಪದಲ್ಲಿ ಸಂಧಿಸಿದರು. ಅವರು ದಿವ್ಯತೆಯಲ್ಲಿ ನೆಲೆಸಿದ್ದರಿಂದ ಇದು ಅವರಿಗೆ ಸಾಧ್ಯವಾಯಿತು. ಆದ್ದರಿಂದ ಅವರು ತ್ಯಾಗದ ಆದರ್ಶವನ್ನೂ ಕೈಬಿಡದೆ, ಪ್ರಪಂಚದಿಂದಲೂ ದೂರವಾಗದೆ, ದಿವ್ಯತೆಯ ಪರಮಸುಖವನ್ನು ಅನುಭವಿಸುತ್ತ ಮಾನವತೆಯೊಂದಿಗೆ ನೈಜ ಸಂಬಂಧವನ್ನಿಟ್ಟುಕೊಂಡು ವಿಶ್ವಮಾನವನಾಗಿ ಬಾಳಿದರು. ಫ್ರಿಜಾಫ್ ಸ್ಕೂನ್ (Fritjof Schuon) ಎಂಬ ಶ್ರೇಷ್ಠ ಪಾಶ್ಚಾತ್ಯ ಸೂಫಿ ಚಿಂತಕನು ಶ್ರೀರಾಮಕೃಷ್ಣರ ಬಗ್ಗೆ ಹೀಗೆ ಹೇಳುತ್ತಾನೆ: "ಶ್ರೀರಾಮಕೃಷ್ಣರು ಒಬ್ಬ ವಿಶ್ವಮಾನವರಾಗಿದ್ದರು. ಯಾವುದೇ ಒಂದು ಪ್ರತ್ಯೇಕ ವರ್ಗಕ್ಕೆ ಸೇರಿಸಲಾಗದ ಒಂದು ವೈಶಿಷ್ಟ್ಯವು ಶ್ರೀರಾಮಕೃಷ್ಣರಲ್ಲಿದೆ. ಅವರು ಧರ್ಮಗಳ ಆಂತರಿಕ ಏಕತೆಯ ಜೀವಂತ ಪ್ರತೀಕವಾಗಿದ್ದರು."

"ಮೊದಲು ನಿನ್ನನ್ನು ನೀನು ತಿಳಿ. ಅನಂತರ ನೀನು ದೇವರನ್ನು ತಿಳಿಯುವೆ," ಎನ್ನುತ್ತಾರೆ ಶ್ರೀರಾಮಕೃಷ್ಣರು. ನಮ್ಮ ಗಮನವೆಲ್ಲ ಹೊರಮುಖವಾಗಿರುತ್ತದೆ, ಹೊರಜಗತ್ತಿನ ವಿಚಾರ, ಸಾಮಾಜಿಕ ವ್ಯವಹಾರ, ಇತರ ವ್ಯಕ್ತಿಗಳ ಆಗುಹೋಗುಗಳು ಇತ್ಯಾದಿ ವಿಷಯಗಳ ಕಡೆ ನಮ್ಮ ಶಕ್ತಿಯೆಲ್ಲ ಹರಿಯುತ್ತಿರುತ್ತದೆ. ನಾವು ನಮ್ಮ ಕಡೆ ಗಮನ ಹರಿಸುವುದೂ ನಮ್ಮ ಸ್ವಾರ್ಥೋದ್ದೇಶದ ಪೂರ್ತಿಗಾಗಿ, ನಮ್ಮನ್ನು ಅರಿಯುವುದಕ್ಕಾಗಿಯಲ್ಲ. ನಮ್ಮ ಶಿಕ್ಷಣ ಪದ್ಧತಿಯೂ ಮುಖ್ಯವಾಗಿ ಹೊರಜಗತ್ತನ್ನು ಅರಿಯುವ ವಿಧಾನ.

ಯಾವುದರ ಮೂಲಕ ನಾವು ಎಲ್ಲವನ್ನೂ ಅರಿಯುವೆವೊ ಅದನ್ನು ಅರಿಯುವ ಪ್ರಯತ್ನ ನಾವು ಮಾಡುವುದಿಲ್ಲ. ಅರಿವಿನ ಬೆಳಕನ್ನು ನಮ್ಮ ಕಡೆ ಹರಿಸುವ ಪ್ರಯತ್ನ ಮಾಡಬೇಕು. ಶ್ರೀರಾಮಕೃಷ್ಣರು ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಿದ್ದರು. ರಾತ್ರಿ ಪಾಳಿಯ ಪೋಲೀಸಿನವನು ದೀಪವನ್ನು ಹಿಡಿದುಕೊಂಡು ಎಲ್ಲವನ್ನೂ ನೋಡುತ್ತಾ ಓಡಾಡುತ್ತಿರುತ್ತಾನೆ. ಆದರೆ ಅವನು ಮಾತ್ರ ಯಾರಿಗೂ ಕಾಣಿಸುವುದಿಲ್ಲ. ಅವನು ತಾನು ಹಿಡಿದಿರುವ ದೀಪವನ್ನು ತನ್ನೆಡೆಗೆ ತಿರುಗಿಸಿದಾಗ ಮಾತ್ರ ಅವನು ಕಾಣಿಸಿಕೊಳ್ಳುತ್ತಾನೆ. ಹಾಗೆಯೇ ನಮ್ಮ ಅರಿವಿನ ಬೆಳಕನ್ನು ನಮ್ಮ ಕಡೆ ಹರಿಸಬೇಕು.

ಶ್ರೀರಾಮಕೃಷ್ಣರು ಹೇಳುವಂತೆ ನಾವು ಕೈಯಲ್ಲಿ ದೀಪವನ್ನು ಹಿಡಿದುಕೊಂಡು ಬೆಂಕಿಗಾಗಿ ಹುಡುಕುವ ಮೂರ್ಖನಂತಿರುತ್ತೇವೆ. ಒಬ್ಬನಿಗೆ ಮಧ್ಯರಾತ್ರಿ ಬೀಡಿ ಸೇದಬೇಕೆನಿಸಿತು. ಬೀಡಿ ಹೊತ್ತಿಸಲು ಮನೆಯಲ್ಲಿ ಬೆಂಕಿ ಇರಲಿಲ್ಲ. ಅವನು ಒಂದು ದೀಪ ಹಿಡಿದು ಕೊಂಡು ಬೆಂಕಿಗಾಗಿ ನೆರೆಮನೆಗೆ ಹೋಗುತ್ತಾನೆ. ನಿದ್ರಿಸುತ್ತಿದ್ದ ನೆರೆಮನೆಯವನನ್ನು ಎಬ್ಬಿಸಿ "ಬೀಡಿ ಹೊತ್ತಿಸಲು ಬೆಂಕಿಪೊಟ್ಟಣ ಕೊಡು" ಎಂದು ಕೇಳುತ್ತಾನೆ. ನೆರೆಮನೆಯವನು ಆತನ ಕೈಯಲ್ಲಿ ದೀಪವಿರುವುದನ್ನು ಕಂಡು, "ನೀನೆಂಥ ಮೂರ್ಖ, ನಿನ್ನ ಕೈಯಲ್ಲೇ ಬೆಂಕಿ ಇಟ್ಟುಕೊಂಡು, ಇಷ್ಟು ದೂರ ಬೆಂಕಿಗಾಗಿ ಬಂದೆಯಲ್ಲ!" ಎಂದು ಅವನನ್ನು ಮೂದಲಿಸಿದನು.

ನಮ್ಮಲ್ಲೇ ನಾವಿರಲು ನಾವೇಕೆ ಇಷ್ಟಪಡುವುದಿಲ್ಲ? ನಮ್ಮಲ್ಲಿ ನಾವು ಕೊರತೆಯನ್ನು ಕಾಣುತ್ತೇವೆ, ನಮ್ಮಲ್ಲಿ ನಾವು ಶೂನ್ಯತೆಯನ್ನು ಕಾಣುತ್ತೇವೆ. ಆ ಶೂನ್ಯತೆಯನ್ನು ತುಂಬಲು ಹೊರಗಿನ ಮಾನ್ಯತೆಯನ್ನೂ, ಪ್ರಶಂಸೆಯನ್ನೂ, ಸ್ಥಾನಮಾನ ಗಳನ್ನೂ ಬಯಸುತ್ತೇವೆ. ಆದರೆ ಎಷ್ಟು ತುಂಬಿಸಿದರೂ ಅದು ತುಂಬುವುದಿಲ್ಲ—ಒರತೆ ಇರದ ಭಾವಿಗೆ ಹೊರಗಿನಿಂದ ನೀರು ತುಂಬಿಸಿದಂತಾಗುತ್ತದೆ. ಆಂತರ್ಯದ ಆನಂದದ ಝರಿ ಮುಚ್ಚಿಹೋಗಿರುವುದರಿಂದಲೇ ನಾವು ನಮ್ಮೊಳಗೇ ಶೂನ್ಯತೆ ಯನ್ನು ಕಾಣುತ್ತೇವೆ.

ಈ ಝರಿಯನ್ನು ಮುಚ್ಚಿರುವುದು ಯಾವುದು? ನಮ್ಮ ಅಹಂಕಾರ. 'ನಾನೇ' ಆ ಝರಿಯ ಮೇಲೆ ಕುಳಿತುಕೊಂಡು ಆ ಆನಂದಸ್ರೋತಕ್ಕೆ ತಡೆಯನ್ನುಂಟುಮಾಡಿ, ಅದನ್ನು ಹೊರಗೆ ಅರಸುತ್ತಿದ್ದೇನೆ. ಈ ಅಹಂಕಾರದ ತಡೆಯನ್ನು ತೊಡೆದುಹಾಕಿದರೆ ಆಗ ಅಂತರಾನಂದ ನಮ್ಮಂತರಂಗವನ್ನು ತುಂಬಿಕೊಳ್ಳುವುದು. ಆಗ ಶೂನ್ಯತೆಯ ಅನುಭವ ಇರುವುದಿಲ್ಲ. ಈ ಅಹಂಕಾರ ಏನೆಂಬು ದನ್ನು ವಿಶ್ಲೇಷಿಸುತ್ತ ಹೋದರೆ ಅದು ಶೂನ್ಯದಲ್ಲಿ ಲಯವಾಗು ತ್ತದೆ. ಶ್ರೀರಾಮಕೃಷ್ಣರು ಹೇಳುತ್ತಾರೆ : "ನನ್ನ ಅಹಂಕಾರ ಎಂದರೇನು? ಇದೇನು ನನ್ನ ಕೈಗಳೇ, ಕಾಲುಗಳೇ, ಮಾಂಸವೇ, ರಕ್ತವೇ, ಅಥವಾ ನನ್ನ ದೇಹದ ಮತ್ತಾವುದಾದರೂ ಅಂಗವೆ? ಸರಿಯಾಗಿ ಆಲೋಚನೆ ಮಾಡಿ ನೋಡು. ಆಗ 'ನಾನು' ಎಂಬ ಅಹಂಕಾರವಿಲ್ಲವೆಂದು ಗೊತ್ತಾಗುವುದು. ಈರುಳ್ಳಿಯ ಸಿಪ್ಪೆಯನ್ನು ಹೆಚ್ಚು ಬಿಡಿಸಿದಂತೆಲ್ಲ ಮತ್ತೂ ಹೆಚ್ಚು ಸಿಪ್ಪೆ ಕಾಣು ವುದು. ಅದರಲ್ಲಿ ತಿರುಳು ಎಂಬುದೇನೂ ಕಾಣುವುದಿಲ್ಲ. ಅದರಂತೆಯೇ ನೀವು ಅಹಂ ಕಾರವನ್ನು ವಿಶ್ಲೇಷಣೆ ಮಾಡುತ್ತಾ ಹೋದರೆ ಅದು ಶೂನ್ಯದಲ್ಲಿ ಲಯವಾಗು ವುದು. ಕೊನೆಗೆ ಏನು ಉಳಿಯುವುದೊ ಅದೇ ಶುದ್ಧ ಆತ್ಮ. ಅಹಂಕಾರ ಲಯವಾದಾಗ ದೇವರು ಕಾಣಿಸುವನು."

> **■ ದೇವರು ಹೊರಗಡೆ ದೂರದಲ್ಲಿ ಇರುವನು ಎಂದು ಭಾವಿಸುವುದೇ ಅಜ್ಞಾನ, ಆಂತರ್ಯದಲ್ಲೇ ದೇವರನ್ನು ಕಾಣುವುದು ಜ್ಞಾನ.**
>
> **—ಶ್ರೀರಾಮಕೃಷ್ಣ ■**

ಹೀಗೆ ನಮ್ಮ ಅಂತರಂಗದಲ್ಲಿ ದಿವ್ಯತೆಯನ್ನು ಕಂಡುಕೊಂಡು, ಆ ದಿವ್ಯತೆಯ ನೆಲೆಯಲ್ಲಿ ಇತರರೊಡನೆ ಮತ್ತು ಜಗತ್ತಿನೊಡನೆ ಆಧ್ಯಾತ್ಮಿಕ ಸಂಬಂಧವನ್ನು ಬೆಳೆಸಿಕೊಳ್ಳುವುದು ಶ್ರೀರಾಮಕೃಷ್ಣರ ಆದರ್ಶ.

ಶ್ರೀರಾಮಕೃಷ್ಣರು ಏಕತೆಯಲ್ಲಿ ನೆಲೆನಿಂತು ಸಮಷ್ಟಿಭಾವವುಳ್ಳವ ರಾದರೂ ವೈವಿಧ್ಯವನ್ನು ಎಂದೂ ಅಲ್ಲಗಳೆಯಲಿಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ ವೈವಿಧ್ಯವೇ ಸೃಷ್ಟಿಯ ನಿಯಮ, ಪೂರ್ಣ ಸಮಾನತೆ ಮೃತ್ಯುವಿನ ಚಿಹ್ನೆ. ಬಣ್ಣಗಳ ವೈವಿಧ್ಯದಿಂದ ಸುಂದರ ಚಿತ್ರವಾಗುತ್ತದೆ, ವಿವಿಧ ಧ್ವನಿಗಳಿಂದ ಮಧುರ ಗಾನ ವಾಗುತ್ತದೆ, ವಿವಿಧ ಭಾವನೆಗಳ ಸಂಯೋಗದಿಂದ ಸಾಹಿತ್ಯ ವಾಗುತ್ತದೆ. ಶಿಕ್ಷಣ, ಸಂಸ್ಕೃತಿ, ಪ್ರತಿಭೆ ಮುಂತಾದ ವಿವಿಧ ಅಂಶ ಗಳು ಕೂಡಿಯೇ ಸುಂದರ ವ್ಯಕ್ತಿತ್ವವಾಗುತ್ತದೆ. ಹೀಗೆಯೇ ವಿವಿಧ ಭಾಷೆ, ಸಂಸ್ಕೃತಿ, ಜನಾಂಗ, ಧರ್ಮಗಳಿಂದ ಒಂದು ಸಮಾಜ ವಾಗುತ್ತದೆ. ವೈವಿಧ್ಯ ಕಡಮೆಯಾದಷ್ಟೂ ನಾವು ಮನುಷ್ಯತ್ವದಿಂದ ದೂರವಾಗುತ್ತ ಹೋಗುತ್ತೇವೆ.

ಆದರೆ ಈ ವೈವಿಧ್ಯ ತನ್ನ ಸೌಂದರ್ಯವನ್ನು ಉಳಿಸಿಕೊಳ್ಳ ಬೇಕಾದರೆ ಅದರ ಹಿಂದೆ ಒಂದು ಮೂಲಭೂತ ಏಕತೆಯಿರಬೇಕು. ಈ ಏಕತೆಯ ದಾರದಲ್ಲಿ ವೈವಿಧ್ಯದ ಪುಷ್ಪಗಳು ಪೋಣಿಸಿರಬೇಕು. ಅಸ್ತವ್ಯಸ್ತವಾಗಿ ಬಣ್ಣವನ್ನು ಬಳಿದರೆ ಚಿತ್ರವಾಗುವುದಿಲ್ಲ, ಒಂದು ಮೂಲಭೂತ ಭಾವವಿದ್ದರೆ ಬಣ್ಣಗಳಿಗೆ ಅರ್ಥ ಬರುತ್ತದೆ. ವಿವಿಧ ಧ್ವನಿಗಳ ಹಿಂದೆ ರಾಗ ಶ್ರುತಿ ಲಯಗಳ ಏಕತೆಯಿದ್ದರೆ ಸುಂದರ ಸಂಗೀತವಾಗುತ್ತದೆ. ಇದೇ ವ್ಯಕ್ತಿ ಮತ್ತು ಸಮಾಜಕ್ಕೂ ಅನ್ವಯಿಸುತ್ತದೆ. ವಿವಿಧ ಅಂಶಗಳಿಂದ ಕೂಡಿದ ವ್ಯಕ್ತಿತ್ವದಲ್ಲಿ ಒಂದು ಸಮಗ್ರತೆಯುಂಟಾಗಬೇಕಾದರೆ ವ್ಯಕ್ತಿತ್ವದ ಹಿನ್ನೆಲೆಯಾದ ದಿವ್ಯತೆಯಲ್ಲಿ ನೆಲೆನಿಂತಿರಬೇಕು. ಹಾಗೆಯೇ ವೈವಿಧ್ಯಮಯ ಸಮಾಜದಲ್ಲಿ ಸುವ್ಯವಸ್ಥೆಯಿರಬೇಕಾದರೆ ಏಕತೆಯ ಸೂತ್ರ ವೊಂದಿರಬೇಕಾಗುತ್ತದೆ—ಅದೇ ಆಧ್ಯಾತ್ಮಿಕ ಸತ್ಯವನ್ನು ಆಧರಿಸಿದ ಸಮಷ್ಟಿ ಭಾವ. ಧರ್ಮ, ಭಾಷೆ, ಜನಾಂಗ ಮುಂತಾದ ಸಂಕುಚಿತ ಭಾವಗಳನ್ನು ಮೀರಿಹೋಗಿ ಮನುಷ್ಯನು ಪ್ರೀತಿ ಸಹಾನುಭೂತಿ ಯಿಂದ ಇಡೀ ಮಾನವಕುಲವನ್ನು ಅಪ್ಪಿಕೊಳ್ಳುವಂತೆ ಮಾಡುವುದೇ ಈ ಸಮಷ್ಟಿಭಾವ. ವೈವಿಧ್ಯವನ್ನು ಅಲ್ಲಗಳೆಯದೆ ಇಂತಹ ಸಮಷ್ಟಿ

ಭಾವವನ್ನು ಬೆಳೆಸಿಕೊಂಡ ಮಹಾನ್ ವ್ಯಕ್ತಿಯೇ ಶ್ರೀರಾಮಕೃಷ್ಣರು.

ಅವರ ಬಗ್ಗೆ ಇನ್ನೋರ್ವ ಪಾಶ್ಚಾತ್ಯ ಮನೀಷಿ ಹೀಗೆನ್ನುತ್ತಾರೆ: "ತಾವು ಯಾವ ಸಂಸ್ಕೃತಿಯ ಭಾಗವಾಗಿ ಜನಿಸಿದ್ದರೋ ಅದರ ಪರಿಧಿಯನ್ನು ಮೀರಿ ಬಹಳ ಎತ್ತರಕ್ಕೆ ಏರಿದ ಅತ್ಯಂತ ಕೆಲವೇ ಮಂದಿ ಆಧ್ಯಾತ್ಮಿಕ ಪುರುಷರಲ್ಲಿ ಶ್ರೀರಾಮಕೃಷ್ಣರು ಒಬ್ಬರು ಎಂದು ನನಗನಿಸುತ್ತದೆ. ಕೆಳಮಟ್ಟದ ಗಿರಿಶಿಖರಗಳ ಕಣ್ಣಿಗೆಟುಕದ ದೃಶ್ಯಗಳನ್ನು ವೀಕ್ಷಿಸುತ್ತಿರುವ ಏಕೈಕ ಮಹೋನ್ನತ ಪರ್ವತ ಶಿಖರದಂತಿರುವವರು ಅವರು."

■ ನವವಿಧಾನ ಕರ್ತೃವಾದ ಭಗವಾನ್ ಶ್ರೀರಾಮಕೃಷ್ಣರು ಹಿಂದಿನ ಎಲ್ಲ ಯುಗಪ್ರವರ್ತಕರ ಸುಸಂಸ್ಕೃತ ಮತ್ತು ನವೀಕೃತ ರೂಪ. —ಸ್ವಾಮಿ ವಿವೇಕಾನಂದ ■

ಸ್ವಾಮಿ ವಿವೇಕಾನಂದರು ಹೇಳುತ್ತಾರೆ : "ಶ್ರೀರಾಮಕೃಷ್ಣರ ಜೀವನವು ಅವರ ಉಪದೇಶಕ್ಕಿಂತ ಸಾವಿರಪಾಲು ಹಿರಿದು. ಅವರು ಉಪನಿಷತ್ತಿನ ಮೇಲೆ ಬರೆದ ಜೀವಂತ ವ್ಯಾಖ್ಯಾನವಾಗಿರುವವರು. ಉಪನಿಷತ್ತಿನ ಸಾರದ ಮೂರ್ತರೂಪವೇ ಅವರು ಎಂದೂ ಹೇಳಬಹುದು. ಅಂತಹ ಅಪೂರ್ವ ಪರಿಪೂರ್ಣತೆ, ಸಜ್ಜನ ದುರ್ಜನರೆಂಬ ಭೇದವರಿಯದ ಆ ಅದ್ಭುತ ದಯೆ, ಬಂಧನದಲ್ಲಿರುವವರ ಮೇಲಿದ್ದ ಆ ತೀವ್ರ ಸಹಾನುಭೂತಿ ಜಗತ್ತಿನಲ್ಲಿ ಇನ್ನೆಲ್ಲೂ ಕಾಣಸಿಗುವುದಿಲ್ಲ. ಸ್ತ್ರೀಪುರುಷರ ನಡುವೆ, ಶ್ರೀಮಂತ ಬಡವರ ನಡುವೆ, ಅಕ್ಷರಸ್ಥ ಅನಕ್ಷರಸ್ಥರ ನಡುವೆ ಮತ್ತು ಬ್ರಾಹ್ಮಣ ಚಂಡಾಲರ ನಡುವೆ ಇರುವ ಭೇದವನ್ನು ಮೂಲೋತ್ಪಾಟನ ಮಾಡಲಾಗಿಯೇ ಅವರು ಬದುಕಿದ್ದರು. ಪ್ರಾಚ್ಯ ಮತ್ತು ಪಾಶ್ಚಾತ್ಯ ನಾಗರಿಕತೆಗಳನ್ನು ಸಮನ್ವಯಗೊಳಿಸುವುದಕ್ಕಾಗಿಯೇ ಅವರು ಬಂದರು. ನಿಜವಾಗಿಯೂ ಭಾರತವು ಹಿಂದಿನ ಅನೇಕ ಶತಮಾನಗಳಿಂದೀಚೆಗೆ ಇಂತಹ ಅದ್ಭುತ ಮತ್ತು ಶ್ರೇಷ್ಠ ಧಾರ್ಮಿಕ ಸಮನ್ವಯಾಚಾರ್ಯರನ್ನು ಉತ್ಪತ್ತಿ ಮಾಡಿರಲಿಲ್ಲ. ಈ ಯುಗದ ಈ ನವವಿಧಾನವು ಜಗತ್ತಿಗೆ, ವಿಶೇಷವಾಗಿ ಭಾರತಕ್ಕೆ, ಶುಭವನ್ನುಂಟುಮಾಡುವುದಾಗಿದೆ. ಈ ನವವಿಧಾನ ಕರ್ತೃವಾದ ಭಗವಾನ್ ಶ್ರೀರಾಮಕೃಷ್ಣರು ಹಿಂದಿನ ಎಲ್ಲ ಯುಗಪ್ರವರ್ತಕರ ಸುಸಂಸ್ಕೃತ ಮತ್ತು ನವೀಕೃತ ರೂಪ."

ಶ್ರೀರಾಮಕೃಷ್ಣರು ಕೇವಲ ಭಾವುಕ ಭಕ್ತರೂ ಅಲ್ಲ, ಶುಷ್ಕ ಜ್ಞಾನಿಯೂ ಅಲ್ಲ—ಇವೆರಡರ ಸಮನ್ವಯ ಮೂರ್ತಿ ಅವರು. ಅವರು ಪರಮಾದ್ಭುತ ತ್ಯಾಗಿಯಾಗಿದ್ದರೂ ಮಾನವತೆಯಿಂದ ದೂರವಾಗಿರಲಿಲ್ಲ. ಅವರು ಸಂತಶ್ರೇಷ್ಠರಾದರೂ, ಸಂಪೂರ್ಣ ಭಗವಂತನಲ್ಲೇ ಮನಸ್ಸುಳ್ಳವರಾದರೂ ಮಾನವ ಜೀವನಕ್ಕೆ ಸಂಬಂಧಪಟ್ಟ ಬೇರಾವ ಅಂಶಗಳನ್ನೂ ಕಡೆಗಣಿಸಲಿಲ್ಲ. ಅವರು ಮಾನವ ಸಂಸ್ಕೃತಿಗೆ ಸಂಬಂಧಪಟ್ಟ ಕಲೆ ಸಾಹಿತ್ಯ ಸಂಗೀತಾದಿಗಳಿಗೆ ಮಾನ್ಯತೆ ನೀಡಿದರು. ಅವರೇ ಉತ್ತಮ ಕಲೋಪಾಸಕರಾಗಿದ್ದರು. ತಾವೇ ಥಿಯೇಟರಿಗೆ ಹೋಗಿ ಗಿರೀಶ್ ಚಂದ್ರ ಘೋಷನ ಧಾರ್ಮಿಕ ನಾಟಕಗಳನ್ನು ನೋಡುತ್ತಿದ್ದರು. ಗಿರೀಶಚಂದ್ರನು ನಾಟಕವೃತ್ತಿಯನ್ನು ತ್ಯಜಿಸುತ್ತೇನೆಂದಾಗ ಅದರಿಂದಲೂ ಜಗದ್ಧಿತವಾಗುತ್ತದೆಯೆಂದು ಹೇಳಿ ಹಾಗೆ ಮಾಡದಂತೆ ಮಾಡಿದರು. ಕಲಾಭಿರುಚಿ ಆಧ್ಯಾತ್ಮಿಕ ಲಕ್ಷಣವೆಂದು ಅವರು ಹೇಳುತ್ತಿದ್ದರು.

ಅವರ ಮನಸ್ಸು ಯಾವಾಗಲೂ ಪ್ರಜ್ಞಾತೀತದೆಡೆಗೇ ಧಾವಿಸುತ್ತಿದ್ದರೂ ಅವರು ಅತ್ಯಂತ ವ್ಯವಹಾರ ಕುಶಲರಾಗಿದ್ದರು. ಅವರು ಕಟ್ಟಾ ಸಂಪ್ರದಾಯವಾದಿಯಾದರೂ ಆಧುನಿಕ ವೈಜ್ಞಾನಿಕ ಆವಿಷ್ಕಾರಗಳಲ್ಲಿ ಕುತೂಹಲವನ್ನು ವ್ಯಕ್ತಪಡಿಸುತ್ತಿದ್ದರು. ಅವರು ಎಷ್ಟೇ ಅಲೌಕಿಕತೆಯಲ್ಲಿ ನೆಲೆನಿಂತಿದ್ದರೂ ಲೌಕಿಕತೆಯನ್ನು ತಿರಸ್ಕರಿಸಲಿಲ್ಲ. ಅವರ ಆಧ್ಯಾತ್ಮಿಕ ಜೀವನ ಐಹಿಕತೆಯಿಂದ ದೂರವಾದ ಯಾವುದೋ ವಿಚಿತ್ರ ಜೀವನವಿಧಾನವಲ್ಲ. ಲೌಕಿಕ ಜೀವನದಲ್ಲಿ ಆಧ್ಯಾತ್ಮಿಕತೆಯನ್ನು ಹೇಗೆ ಅಳವಡಿಸಿಕೊಂಡು ಬಾಳುವುದೆಂಬುದನ್ನು ಅವರು ತೋರಿಸಿಕೊಟ್ಟರು.

ಶ್ರೀರಾಮಕೃಷ್ಣರಲ್ಲಿ ಸ್ತ್ರೀ ಮತ್ತು ಪುರುಷ ಭಾವಗಳು ಬಹಳ ಸುಂದರವಾಗಿ ಸಮನ್ವಯಗೊಂಡಿದ್ದುವು. ಸ್ತ್ರೀಯರ ಅಂತರಂಗವನ್ನು ಅರಿಯುವ ಅಪೂರ್ವ ಸಾಮರ್ಥ್ಯ ಅವರಿಗಿದ್ದುದು ಮಾತ್ರವಲ್ಲದೆ ಸ್ತ್ರೀಯರ ಹಾವಭಾವಗಳನ್ನೂ ಅತ್ಯಾಶ್ಚರ್ಯಕರವಾಗಿ ಅನುಕರಿಸುತ್ತಿದ್ದರು. ಇದರಲ್ಲಿ ಸ್ವಲ್ಪವೂ ಅಸ್ವಾಭಾವಿಕತೆಯಿರಲಿಲ್ಲ. ಸ್ತ್ರೀಭಕ್ತೆಯರಿಗೆ ಅವರೊಡನಿದ್ದಾಗ ಅವರು ತಮ್ಮವರಲ್ಲೇ ಒಬ್ಬರು ಎಂದೆನಿಸುತ್ತಿತ್ತಂತೆ, ಅವರು ಪುರುಷರು ಎಂದೆನಿಸುತ್ತಿರಲಿಲ್ಲ. ಆದ್ದರಿಂದ ಸ್ತ್ರೀಭಕ್ತರು ಅವರೊಡನೆ ಅತ್ಯಂತ ನಿಃಸಂಕೋಚವಾಗಿ ವ್ಯವಹರಿಸುತ್ತಿದ್ದರು. ಎಷ್ಟರಮಟ್ಟಿಗೆ ಅವರಲ್ಲಿ ಈ ಸ್ತ್ರೀಪುರುಷ ಭಾವಗಳು ಮೇಳವಿಸಿದ್ದವೆಂದರೆ ಒಮ್ಮೆ ಗಿರೀಶ ಚಂದ್ರ ಘೋಷನು ಅವರನ್ನು ಕೇಳುತ್ತಾನೆ, "ಮಹಾಶಯರೆ, ನೀವು ಗಂಡಸರೇ ಅಥವಾ ಹೆಂಗಸರೇ?" ಎಂದು. ಶ್ರೀರಾಮಕೃಷ್ಣರು "ನನಗೆ ತಿಳಿಯದು" ಎಂದು ಉತ್ತರಿಸಿದರು.

ಹೀಗೆ ಶ್ರೀರಾಮಕೃಷ್ಣರಲ್ಲಿ ಅನೇಕ ಅಂಶಗಳ ಸಮನ್ವಯವನ್ನು ಕಾಣುತ್ತೇವೆ. ದಿವ್ಯತೆ ಮತ್ತು ಮಾನವೀಯತೆ, ಸಾಂಪ್ರದಾಯಿಕತೆ ಮತ್ತು ಆಧುನಿಕತೆ, ಆಧ್ಯಾತ್ಮಿಕತೆ ಮತ್ತು ವ್ಯಾವಹಾರಿಕತೆ, ಜ್ಞಾನ ಮತ್ತು ಭಕ್ತಿ, ಏಕನಿಷ್ಠೆ ಮತ್ತು ಪರಮತಸ್ವೀಕಾರ, ಭಾವುಕತೆ ಮತ್ತು ವೈಚಾರಿಕತೆ—ಇವೆಲ್ಲ ಒಂದೇ ವ್ಯಕ್ತಿಯಲ್ಲಿ ಪೂರ್ಣತೆಯನ್ನು ಪಡೆದ ಪರಿಪೂರ್ಣ ವ್ಯಕ್ತಿಯಾಗಿದ್ದರು ಶ್ರೀರಾಮಕೃಷ್ಣರು. ಅವರು ವೈಷ್ಣವರೊಡನೆ ವೈಷ್ಣವರಾಗಿ, ಶೈವರೊಡನೆ ಶೈವರಾಗಿ, ಶಾಕ್ತರೊಡನೆ ಶಾಕ್ತರಾಗಿ, ಕ್ರೈಸ್ತರೊಡನೆ ಕ್ರೈಸ್ತರಾಗಿ, ಮುಸ್ಲಿಮರೊಡನೆ ಮುಸ್ಲಿಮರಾಗಿ, ಸ್ತ್ರೀಯರೊಡನೆ ಸ್ತ್ರೀಯಾಗಿ, ಪುರುಷರೊಡನೆ ಪುರುಷನಾಗಿ, ಸಾಮಾನ್ಯರೊಡನೆ ಸಾಮಾನ್ಯ ವ್ಯಕ್ತಿಯಾಗಿ, ಶ್ರೇಷ್ಠರೊಡನೆ ಶ್ರೇಷ್ಠರಾಗಿ ಎಲ್ಲರೊಡನೆ ಒಂದಾಗಿ ಬಾಳಿದರು.

◆